11.	Vinod Traders Koteshwar	99.45 99-25 199.14	4-2-91 5-2-91 5-2-91
12.	P.H. Pai Shiroor	99.75	14-2-91
	Total.....	2806.47 280.6 Mts	

ದ.ಕನ್ನಡ ಜಿಲ್ಲೆಯಲ್ಲಿ ಕೃಷಿಗಾಗಿ ಸೀಮೆ ಎಣ್ಣೆ ಪಡಿತರ ಪರವಾನಗಿ ಕುರಿತು

648 - ಶ್ರೀ ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*1) ದಕ್ಷಿಣ * ಕನ್ನಡ ಜಿಲ್ಲೆಯಲ್ಲಿ ಕೃಷಿಗಾಗಿ ಸೀಮೆಎಣ್ಣೆ ಪರವಾನಗಿಗಾಗಿ ಬಂದಿರುವ ಅರ್ಜಿಗಳ ಸಂಖ್ಯೆ.*

2) ಈ ಅರ್ಜಿಗಳ ಪೈಕಿ ನೀಡಿರುವ ತಾಲ್ಲೂಕ್‌ವಾರು ಪರವಾನಗಿಗಳ ಸಂಖ್ಯೆ.

3) ಈ ಪರವಾನಗಿಗಳಿಗೆ ಈವರೆಗೆ ನೀಡಲಾಪ ಸೀಮೆಎಣ್ಣೆ ಪ್ರಮಾಣ.

ಶ್ರೀ ಟಿ.ಎನ್. ನರಸಿಂಹಮೂರ್ತಿ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು):

1) 18,323 ಅರ್ಜಿಗಳು ಬಂದಿರುತ್ತವೆ.

2) ಅರ್ಜಿಗಳ ಪೈಕಿ 17,995 ಪರವಾನಗಿಗಳನ್ನು ನೀಡಲಾಗಿದೆ.

3) ಈ ಪರವಾನಗಿಗಳಿಗೆ 3,83,615 ಲೀಟರ್ ಸೀಮೆಎಣ್ಣೆಯನ್ನು ಕೊಡಲಾಗಿದೆ.

ಡೀಸೆಲ್ ಮತ್ತು ಸೀಮೆಎಣ್ಣೆ ಪೂರೈಕೆ

558 - ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಡೀಸೆಲ್‌ಮತ್ತು ಸೀಮೆಎಣ್ಣೆ ರೈತರಿಗೆ ಮತ್ತು ಸಾರ್ವಜನಿಕರಿಗೆ ಸಾಕಷ್ಟು ಪ್ರಮಾಣದಲ್ಲಿ ಪೂರೈಕೆಯಾಗುತ್ತಿಲ್ಲವೆಂದು ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾದಿದಲ್ಲಿ,ಈ ಬಗ್ಗೆ ಸರ್ಕಾರದವರು ಕೈಗೊಂಡ ಕ್ರಮವೇನು?

ಇ) ಕೃಷಿಕರಿಗೂ ಮತ್ತು ಉದ್ದಿಮೆದಾರರಿಗೂ ಪಡಿತರ ಸೀಮೆಎಣ್ಣೆ ಪೂರೈಕೆ ಮಾಡುವ ದರದಲ್ಲಿ ವ್ಯತ್ಯಾಸವಿದೆಯೇ?

ಈ) ಇದ್ದರೆ ಆ ಬಗ್ಗೆ ಇರುವ ವ್ಯತ್ಯಾಸವೇನು?

ಶ್ರೀ ಟಿ.ಎನ್. ನರಸಿಂಹಮೂರ್ತಿ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು) :

ಅ) ಬಂದಿದೆ.

ಆ) ರಾಜ್ಯ ಸರ್ಕಾರವು ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸಿ ಅವಶ್ಯಕವಿರುವಷ್ಟು ಸೀಮೇಎಣ್ಣೆ ಹಾಗೂ ಡೀಸೆಲ್ ಅನ್ನು ಸರಬರಾಜು ಮೊದಲು ಕೋರಿದೆ. ಜಿಲ್ಲೆಯ ಎಲ್ಲಾ ಜಿಲ್ಲಾಧಿಕಾರಿಗಳಿಗೆ ಪತ್ರ ಬರೆದು ತೀವ್ರ ರೀತಿಯಲ್ಲಿ ದಾಳಿಯನ್ನು ನಡೆಸುವಂತೆ ಸೂಚನೆಗಳನ್ನು ನೀಡಲಾಗಿದೆ.

ಇ) ಇಲ್ಲ.

ಈ) ಉದ್ಭವಿಸುವುದಿಲ್ಲ.